ಸೊಟರುಗುಟ್ಟುತ್ತಿದ್ದಳು. ‘ಎಷ್ಟೊಂದ್ ದಪ ಹೇಳಿದೀನ್ಲಾ ಮಗ ನಿಂಗೆ ವಪ್ಪಾರಲಿರೋ ನೇಗ್ಲು ಸಡ್ಡೆ ಕೂರ್ಗೆ ಹೆಗ್ಗುಂಟ್ಗುಳ್ ಮ್ಯಾಲೆಲ್ಲಾ ನೀರು ಇಳ್ಕಂತಾಯ್ತೆ, ಹೆಂಚು ಕೈಯ್ಯಾಡ್ಸಿ ಮುಕ್ಕಾಗಿರೋ ದಬ್ಬೆಂಚ್ಗುಳ್ನ ಬದ್ಲಾಯ್ಸು ಅಂತಾವ. ಇಂಗೇ ಆದ್ರೆ ತೊಲೆ ಜವೀನೂ ನೀರ್ಕುಡ್ದು ನಿಗುತ್ಕಂತವೆ ತಗಾ, ಅಲ್ಲಾ ಹಂಕ್ಲು ತೆನೇನಾ ಆಯ್ಕಂಡ್ ಬಂದು ಏಸ್ ದಿಸಾತು ಮೂಲೇಲಿ ಅಂಗೇ ಬಿದ್ದಾವೆ’ ನಡುಮನೆಯಿಂದ ರಸ್ತೆಯನ್ನೇ ದಿಟ್ಟಿಸುತ್ತಾ ಕಾಟ್ಮಾರಯ್ಯ ಬಡಬಡಿಸುತ್ತಿದ್ದ. ಮುಂದುವರೆದು, ‘ಕಲ್ಲೊಲದ ಪೈರು ದಟ್ನಾಗೈತೆ ಅಡ್ಡರ್ತೆ ವೊಡೀದಿದ್ರೆ ತೆಂಟೆ ವರ್ಕಣಲ್ಲ ನೋಡು, ಮಳೆ ಬೀಳಾದ್ರೊಳ್ಗೆ ಆ ಕೊಪ್ಲು ಬೇಲೀನಾ ವಸಿ ನೇರೂಪು ಮಾಡೂಂದೆ, ತ್ವಾಟದೊಳೀಕೆ ಪುಂಡಿಕಾಳು ತೊಳ್ಯಪ್ಪಾಂದೆ, ಯಾವುದ್ನೂ ಮಾಡ್ಲುಲ್ಲ’. ಚಿಕ್ಬಸವನಿಗೆ ಎದೆ ಹಾರಿದಂತಾಯ್ತು.

ಅಪ್ಪ ಪಟ್ಟಣಕ್ಕೆ ಬಂದಾಗಿಂದಲೂ ಯಾವತ್ತೂ ಹಿಂಗಾಡಿದವನಲ್ಲ ಅಂತಂದುಕೊಳ್ಳುತ್ತಲೇ ಹತ್ತಿರ ಹೋದ ಚಿಕ್ಬಸವ, ‘ಅಪ್ಪಾ ಅಪ್ಪೋ’ ಅಂತ ಕಾಟ್ಮಾರಯ್ಯನನ್ನು ಅಲುಗಾಡಿಸಿದ. ಚಕ್ಕನೆ ಎಚ್ಚೆತ್ತವನಂತೆ ಕಾಟ್ಮಾರಯ್ಯ, ‘ಅದ್ಯಾವಾಗ ಬಂದ್ಯಲ ಮಗಾ, ಅಲೆಯ ಬೈಗಾಗಿ ಹೋಗೈತ’ ಅಂದ. ಚಿಕ್ಬಸವ ಅಪ್ಪನ ಪಕ್ಕ ಕುಸಿದ. ಅವನ ಕಣ್ಣುಗಳು ತುಂಬಿಕೊಳ್ಳತೊಡಗಿದವು. ಬೂದೂರಿಯ ಮಾತುಗಳು ಮತ್ತೊಮ್ಮೆ ಗುಂಗಡಿಸಿದವು. ಹೆಂಡತಿ ನಿಂತಲ್ಲೇ ಕಲ್ಲಾಗಿದ್ದಳು.

‘ಇದು ಕುರ್ತೇಟು ಯಾರ್ದೋ ಕೈವಾಡ, ಯಾವ್ದೋ ಮನೆಮುರ್ಕ ದೇವ್ರಿಗೆ ಕೈಮುಕ್ಕಂಡವ್ರೆ, ಅಲ್ದುದ್ರೆ ಯಾಕಿಂಗೆ ಆಡೋರು’ ಸಣ್ಮಾದಮ್ಮ ಮೌನ ಮುರಿದಳು. ಯಾರೊಬ್ಬರೂ ತುಟಿಬಿಚ್ಚದ್ದರಿಂದ, ‘ಇಲ್ಗೆ ಬಂದ ಹೊಸುದ್ರಲ್ಲಿ ಕೈಮಸ್ಗಾಕಿ ಸುತ್ರಾಂ ಏನೂ ಸೇರ್ದಂಗೇ ಮಾಡರ್ಲಿಲ್ವ, ಮದ್ದು ಕೊಡ್ಸಿದ್ ಮ್ಯಾಲೆ ತಾನೆ ನಿಮ್ಮಪ್ಪ ರವಷ್ಟು ಗೆಲ್ವಾಗಿದ್ದು. ಹೆಂಗಾರಾ ಆಗ್ಲಿ ಊರ್ಗೋಗಿ ಶಾಸ್ತ್ರುದ್ ಮಳ್ಳಪ್ಪನ್ನ ಒಂದ್ಮಾತು ಕೇಳ್ಕಂಡು ಬಾ’ ಅನ್ನುತ್ತಾ ಮಗನನ್ನು ದಿಟ್ಟಿಸಿದಳು. ಚಿಕ್ಬಸವ ಕಲ್ಲಾಗಿದ್ದ.

## 2

ಚಿಕ್ಬಸವನ ಮನೆಮಂದಿಯೆಲ್ಲಾ ಪಟ್ಟಣ ಸೇರಿ ಕಳೆದ ಯುಗಾದಿಗೆ ಮೂರು ತುಂಬಿ ನಾಲ್ಕಕ್ಕೆ ಬಿದ್ದಿತ್ತು. ಅಷ್ಟರಲ್ಲಿ ಚಿಕ್ಬಸವ ಅದೂ ಇದೂ ಕೆಲಸ ಮಾಡಿ ಸದ್ಯ ಖಾಸಗಿ ಕಂಪನಿಯೊಂದರಲ್ಲಿ ಕಾರ್ ಡ್ರೈವರ್ ಆಗಿದ್ದ. ಹೆಂಡತಿ ನಾಗು ಗಾರ್ಮೆಂಟ್ ಫ್ಯಾಕ್ಟರಿಯೊಂದಕ್ಕೆ ಹೋಗುತ್ತಿದ್ದಳು. ಅವ್ವ ಸಣ್ಮಾದಮ್ಮ ಮಾರ್ಕೆಟ್ಟಿನಿಂದ ಬಿಡಿ ಹೂಗಳನ್ನು ತಂದು ಹೂವಿನ ಅಂಗಡಿಯೊಂದಕ್ಕೆ ಹಾರ ಕಟ್ಟಿ ಕೊಡುತ್ತಿದ್ದಳು.

ಕಾಟ್ಮಾರಯ್ಯ ಮಾತ್ರ ವರ್ಷವಾದರೂ ಯಾವುದಕ್ಕೂ ಬಡಪಟ್ಟಿಗೆ ಒಗ್ಗಿಕೊಳ್ಳಲಾರದೆ ವಿಲಗುಟ್ಟಿದ್ದ. ಸಂಜೆ ಮುಂಜಾನೆಗಳಲ್ಲಿ ಒಂದಷ್ಟೊತ್ತು ಅಲ್ಲಿ ಇಲ್ಲಿ ಅಡ್ಡಾಡುತ್ತಿದ್ದ. ಊರಿನ ನೆನಪು ಒತ್ತರಿಸಿದಾಗಲೆಲ್ಲಾ, ‘ನಂಗಿವತ್ತ ಎಮ್ಮೆ ಸುಬ್ಬಿ ಕನ್ಸಿಗೆ ಬಂದಿದ್ಲು’, ‘ಈಟೊತ್ಗೆ ಸಸಿಗುಳೆಲ್ಲಾ ದಸಿ ನೂಕ್ತಿದ್ವು’, ‘ಮ್ಯಾಕೆಗುಳು ಏನಿಲ್ಲಾಂದ್ರೂ ಹತ್ತಿಪ್ಪತ್ತು ಮರಿ ಹಾಕ್ತುದ್ವು’ ಮುಂತಾಗಿ ತನ್ನಷ್ಟಕ್ಕೆ ತಾನೇ ಮಾತಾಡಿಕೊಳ್ಳುತ್ತಿದ್ದ. ಕಡೆಗೊಂದು ದಿನ್, ‘ಅಪ್ಪಣ್ಣೆ ನಂಗೂ ಎಂಥದಾರ ಒಂದು ಕೆಲ್ಸ ಹುಡುಕ್ಲ’ ಅಂತ ಕೇಳಿದ್ದ. ಅಪ್ಪ ಏನೂಂತ ಗೊತ್ತಿದ್ದ ಚಿಕ್ಬಸವ, ‘ಅಯ್ಯೋ ಏನೂ ಬ್ಯಾಡ ಬಿಡಪ್ಪ ಮನೇಲಿರು ಸಾಕು’ ಅಂದಿದ್ದ. ‘ಇಲ್ಲಿ ಕೂತ್ಕಂಡು ಗೆಣುಸ್ ಕೆತ್ಲ, ಎಂಥದಾರ ಕೆಲ್ಸಾಂಥ ಮಾಡಿದ್ರೆ ವೊತ್ತೂ ವೋಗುತ್ತೆ ಕೈಗೊಂಚೂರು ಕಾಸೂ ಸಿಕ್ಕುತ್ತೆ, ಬಂಗ ಬಡ್ತನ್ನಾಕಗಲ್ವ’ ಕಾಟ್ಮಾರಯ್ಯ ಮಾತಾಕಿದ್ದ.

ಹಂಗಾಗಿ ಚಿಕ್ಬಸವ ಕೈ ತೋಟದ ಉಸ್ತುವಾರಿಕೆಯ ಕೆಲಸವೊಂದನ್ನು ಹುಡುಕಿದ್ದ. ಕೆಲ ದಿನ ಅದನ್ನು ಮನಸಿಟ್ಟು ಮಾಡಿದ ಕಾಟ್ಮಾರಯ್ಯ ಒಂದಿನ, ‘ಮಗಾ ನಂಗೀ ಕೆಲ್ಸ ಬ್ಯಾಡ ಬ್ಯಾರೇನಾದ್ರೂ ನೋಡಪ್ಪ’ ಅಂದುಬಿಟ್ಟಿದ್ದ. ಹಂಗೆ ನೋಡಿದರೆ ಅವನಿಗದು ಕಷ್ಟದ ಕೆಲಸವೇನಾಗಿರಲಿಲ್ಲ. ಗಿಡಗಳಿಗೆ